ಸಿಟ್ಟಾಗುತ್ತಿದ್ದೆ. ಇವರಿಬ್ಬರ ಜತೆಯಲ್ಲಿ ಕೆಲಸ ಮಾಡಿದಮೇಲೆ ಸಿನಿಮಾಗೆ ಬೋರ್ ಆಗದಂತೆ ಗಟ್ಟಿ ಸ್ಕ್ರಿಪ್ಟ್ ಮಾಡಬೇಕು ಎನ್ನುವುದು ಗೊತ್ತಾಯಿತು. ಸ್ಕ್ರಿಪ್ಟ್ ಚೆನ್ನಾಗಿದ್ದರೆ ಸಹಜವಾಗಿಯೇ ಸಂಭಾಷಣೆ ಬರೆಯಬಹುದು. ಅದು ಹಿಟ್ ಆಗುವ ಸಾಧ್ಯತೆ ಇರುತ್ತದೆ.

ನಾನು ಮುಂದೆ ಕಾದಂಬರಿಗಳನ್ನು ಬರೆಯುವಾಗಲೂ ಓದುಗರು ಬೋರ್ ಆಗದಂತೆ ಅದನ್ನು ಒಂದೇ ಗುಕ್ಕಿಗೆ ಓದಬೇಕು ಎಂದುಕೊಂಡೇ ಶೈಲಿಯನ್ನು ಅಳವಡಿಸಿಕೊಂಡೆ. ಅದನ್ನು ಈ ಇಬ್ಬರಿಂದಲೂ ಕಲಿತೆ.

◆ **ಸಿನಿಮಾ ಬರಹಪೂರ್ವದ ನಿಮ್ಮ ಸಾಹಿತ್ಯಕ್ಕೂ, ನಂತರದ ನಿಮ್ಮ ಸಾಹಿತ್ಯಕ್ಕೂ ಆದ ಬದಲಾವಣೆ ಏನು?**

ರಸವತ್ತಾಗಿರಬೇಕು. ಸನ್ನಿವೇಶಗಳು, ಸಂಭಾಷಣೆ ಚೆನ್ನಾಗಿರಬೇಕು ಎನ್ನುವುದನ್ನು ನಾನು ಬರವಣಿಗೆಯಲ್ಲಿ ಅಳವಡಿಸಿಕೊಂಡೆ. ಸಿನಿಮಾಗೆ ನಾನು ಬರೆಯಲು ಆರಂಭಿಸಿದ ಮೇಲೆ ವಿಮರ್ಶೆ ಮಾಡುವುದನ್ನೇ ಬಿಟ್ಟುಬಿಟ್ಟರು. ಟಿ.ಪಿ. ಅಶೋಕ ಅವರು 'ಮದಕರಿನಾಯಕ' ಕುರಿತು ವಿಮರ್ಶೆ ಬರೆದಿದ್ದರು. ನಾನು ಸಿಬಿಝುಡ್ ಓದಿದವನು; ವಿಜ್ಞಾನದ ವಿದ್ಯಾರ್ಥಿ. ವಿಮರ್ಶೆಯ ಕುರಿತು ತಲೆಕೆಡಿಸಿಕೊಂಡವನೇ ಅಲ್ಲ.

'ವೇಣು ಅವರು ಸಿನಿಮಯವಾಗಿ ಬರೆಯುತ್ತಾರೆ' ಎಂದೆಲ್ಲ ಕೆಲವರು ಟೀಕಿಸಿದರು. ಅದಕ್ಕೆ ನಾನು ತಲೆಕೆಡಿಸಿಕೊಳ್ಳಲಿಲ್ಲ. ಸಿನಿಮಾಗೆ ಬರೆದ ಮೇಲೆ ನನ್ನ ಸಾಹಿತ್ಯಕ್ಕೂ ಆದದ್ದು ಲಾಭವೇ. ಒಂದು ವಿಚಾರಸಂಕಿರಣದಲ್ಲಿ ಸಿನಿಮಯ ಎಂದರೇನು ಎಂದು ನಾನೇ ಕೇಳಿದೆ. ಕಾದಂಬರಿಯನ್ನು ಜನರು ಓದುವುದೇ ಕಷ್ಟ. ಓದಿದರೆ ಸಿನಿಮಾ ನೋಡಿದಹಾಗೆ ಆಗುತ್ತದೆ ಎನ್ನುವುದಾದರೆ ಅದು ಗೆಲುವೇ ಅಲ್ಲವೇ ಎಂದೆ.

ಹುಬ್ಬಳ್ಳಿಯ ಸಮಾರಂಭವೊಂದರಲ್ಲಿ ಹಾ.ಮಾ. ನಾಯಕರು, 'ನೀವು ಸಾಹಿತಿಯೋ, ಸಿನಿಮಾ ಸಾಹಿತಿಯೋ ಎಂಬ ಜಿಜ್ಞಾಸೆ ಇದೆಯಲ್ರೀ' ಎಂದರು. ನಿಮಗೆ ಏನನ್ನಿಸುತ್ತದೆ

